ರಾಜಸಿಕ ವ್ಯಕ್ತಿಗಳು ಆಸೆಗಳಿಂದ ಬದ್ಧರಾಗಿರುವುದರಿಂದ ಮೇಲಕ್ಕೂ ಹೋಗದೆ, ಕೆಳಕ್ಕೂ ಇಳಿಯದೆ ಯಾವಾಗಲೂ ಪ್ರಾಪಂಚಿಕರಾಗಿಯೇ ಇರುತ್ತಾರೆ. ಇಂದ್ರಿಯ ಸುಖವೇ ಅವರಿಗೆ ಪ್ರಧಾನವಾಗಿರುತ್ತದೆ. ಅವರು ಸ್ವರ್ಗಕ್ಕೆ ಹೋದರೆ ಅಲ್ಲಿಯೂ ಇಂದ್ರಿಯ ಸುಖದಲ್ಲಿಯೇ ಮಗ್ನರಾಗಿರುತ್ತಾರೆ. ಈ ಪ್ರಾಪಂಚಿಕ ಸುಖದ ತೀವ್ರಾವಸ್ಥೆಯೇ ಸ್ವರ್ಗ. ತಾಮಸಿಕ ವ್ಯಕ್ತಿಗಳಿಗೆ ಇಂದ್ರಿಯ ಸುಖವನ್ನು ಅನುಭವಿಸುವುದಕ್ಕೂ ಸೋಮಾರಿತನ. ಪ್ರಾಪಂಚಿಕ ಸುಖವನ್ನು ಅನುಭವಿಸಬೇಕಾದರೂ ದುಡಿದು ಹಣಸಂಪಾದನೆ ಮಾಡಬೇಕು. ಅದಕ್ಕೆ ಸೋಮಾರಿತನ ಬಿಡುವುದಿಲ್ಲ, ತೀರ ಕೆಳಮಟ್ಟದ ಇಂದ್ರಿಯ ತೃಪ್ತಿಯಲ್ಲಿಯೇ ಅವರು ಮಗ್ನರಾಗಿರುತ್ತಾರೆ. ಈ ಸ್ಪರ್ಧಾತ್ಮಕ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲಾಗದೆ ಕೊಳಚೆ ಪ್ರದೇಶದಲ್ಲಿಯೇ, ಕೆಲವೊಮ್ಮೆ ಪ್ರಾಣಿಗಳಿಗಿಂತಲೂ ಹೀನ ತರವಾದ, ನಮಗಿಷ್ಟೇ ಸಾಕಪ್ಪ ಎಂಬ 'ಶೋಚನೀಯ ಸಂತೃಪ್ತಿಯ', ಅಭ್ಯುದಯದಲ್ಲಿಯೂ ಆಸಕ್ತಿಯಿಲ್ಲದ (ನಿಃಶ್ರೇಯಸ್ಸಂತೂ ದೂರದ ಮಾತು – ಅದು ಸಾತ್ತ್ವಿಕ ಲಕ್ಷಣ) ಜೀವನ ನಡೆಸುತ್ತಾರೆ.

ಸ್ವಾಮಿ ವಿವೇಕಾನಂದರ ಪ್ರಕಾರ ಜ್ಞಾನಕ್ಕೆ ಮೂರು ಪ್ರಭೇದಗಳಿವೆ: ಹುಟ್ಟುಗುಣ, ಯುಕ್ತಿ ಮತ್ತು ಅಂತರ್ದೃಷ್ಟಿ. ಅವರು ಹೇಳುತ್ತಾರೆ: ''ಹುಟ್ಟುಗುಣವು ಮಂಜುಗಡ್ಡೆಯಂತೆ, ಯುಕ್ತಿಯು ನೀರಿನಂತೆ ಮತ್ತು ಅಂತರ್ದೃಷ್ಟಿಯು ಸೂಕ್ಷ್ಮವಾದ ಆವಿಯಂತೆ. ಇವು ಒಂದಾದ ಮೇಲೊಂದು ಬರುತ್ತವೆ.'' ಹುಟ್ಟುಗುಣವು ತಮಃಪ್ರಧಾನವೆಂದೂ ಯುಕ್ತಿಯು ರಜಃಪ್ರಧಾನವೆಂದೂ ಅಂತರ್ದೃಷ್ಟಿಯು ಸತ್ತ್ವಪ್ರಧಾನವೆಂದೂ ಹೇಳಬಹುದು. ಇಂತಹ ಸಾತ್ತ್ವಿಕ ಜ್ಞಾನವು ವ್ಯಕ್ತಿಯಲ್ಲಿ ಅಧಿಕವಾದಾಗ ಅವನ ಇಡೀ ವ್ಯಕ್ತಿತ್ವವೇ ಅಪೂರ್ವ ಶೋಭೆಯಿಂದ ಬೆಳಗುತ್ತದೆ ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಇಷ್ಟೆಲ್ಲ ಗುಣಗಳ ವಿಷಯವನ್ನು ಹೇಳಿ, ಈ ಮೂರು ಗುಣಗಳನ್ನು ಮೀರಿ ಹೋಗುವುದು ಆತ್ಯಂತಿಕ ಗುರಿ ಎಂದು ಶ್ರೀಕೃಷ್ಣನು ಹೇಳಿ ಗುಣಾತೀತನ ಲಕ್ಷಣಗಳನ್ನು ವಿವರಿಸುತ್ತಾನೆ. ತ್ರಿಗುಣಗಳ ಪರಿಣಾಮದಿಂದ ವ್ಯಕ್ತಿತ್ವದಲ್ಲಿ ಉಂಟಾಗುವ ಎಲ್ಲ ಬದಲಾವಣೆಗಳ ವಿಷಯದಲ್ಲೂ ಅವನು ನಿರ್ಲಿಪ್ತನಾಗಿರುತ್ತಾನೆ. ಸತ್ತ್ವಗುಣದ ಪರಿಣಾಮದಿಂದ ಸುಖ ಮತ್ತು ಜ್ಞಾನ ಉಂಟಾಗಬಹುದು ಅಥವಾ ಹೋಗಬಹುದು. ಕೆಲವು ವಿದ್ವಾಂಸರು ವೃದ್ಧಾಪ್ಯದಲ್ಲಿ ಸ್ಮೃತಿಲೋಪದಿಂದ ತಾವು ಸಂಪಾದಿಸಿದ ಜ್ಞಾನವನ್ನೆಲ್ಲ ಕಳೆದುಕೊಂಡು ತುಂಬ ಪರಿತಪಿಸುತ್ತಾರೆ. ಆದರೆ ಗುಣಾತೀತನು ಜ್ಞಾನವಿದ್ದಾಗಲೂ ಹೆಮ್ಮೆ ಪಡುವುದಿಲ್ಲ, ಅದನ್ನು ಕಳೆದುಕೊಂಡಾಗಲೂ ಪರಿತಪಿಸುವುದಿಲ್ಲ. ಗುಣಾತೀತನು ಸುಮ್ಮನಿರುತ್ತಾನೆ, ಕೆಲಸ ತಾನಾಗಿ ಬಂದರೆ ಮಾಡುತ್ತಾನೆ, ಕೆಲಸವಿಲ್ಲವೆಂದು ಚಿಂತಿಸುವುದೂ ಇಲ್ಲ. ಅಂದರೆ ಅವನು ರಜೋಗುಣದ ಪ್ರಭಾವಕ್ಕೂ ವಶನಾಗಿರುವುದಿಲ್ಲ. ಕೆಲವೊಮ್ಮೆ ಅವನು ಜಡನಾಗಿಯೂ ಇರಬಹುದು. ಇದು ತಮಸ್ಸಿನ ಗುಣ. ಹೀಗೆ ಅವನು ಗುಣಗಳ ಕ್ರಿಯೆಯಿಂದ ವಿಚಲಿತನಾಗುವುದಿಲ್ಲ. ಇಲ್ಲಿ ವಿವರಿಸುವ ಗುಣಾತೀತನ ಲಕ್ಷಣಗಳು ಹಿಂದೆ ಹೇಳಿದ ಸ್ಥಿತಪ್ರಜ್ಞ ಮತ್ತು ಭಕ್ತನ ಲಕ್ಷಣಗಳಿಗೆ ಸಮಾನವಾಗಿವೆ. ಮುಂದೆ ಹದಿನೇಳು ಮತ್ತು ಹದಿನೆಂಟನೆಯ ಅಧ್ಯಾಯದ ಆದಿಭಾಗದಲ್ಲಿ ಮತ್ತೆ ಈ ಗುಣತ್ರಯ ವಿಭಾಗವು ಬರುತ್ತದೆ. ಅಲ್ಲಿ ಜೀವನದ ಎಲ್ಲ ಅಂಶಗಳಿಗೂ ಇವನ್ನು ಅನ್ವಯಿಸಿ ವಿವರಿಸಲಾಗಿದೆ. *

## ವೇದ ಸಂಸ್ಕೃತಿಯಲ್ಲಿ ವಿಗ್ರಹಾರಾಧನೆ

ಆಧ್ಯಾತ್ಮಿಕ ದೃಷ್ಟಿಯಿಂದ ವೇದವಾಙ್ಮಯವು ಭಕ್ತಿ, ಜ್ಞಾನ, ಕರ್ಮ ಮುಂತಾದ ಎಲ್ಲ ಭಾರತೀಯ ತತ್ತ್ವಗಳಿಗೂ ಮೂಲ. ವೇದದಲ್ಲಿ ಹೇಳಿದ ಶ್ರದ್ಧಾ, ಉಪನಿಷತ್ತುಗಳ ಉಪಾಸನಾ ಇವೇ ಪುರಾಣಗಳ ಕಾಲದಲ್ಲಿ ಭಕ್ತಿ ಎಂಬುದಾಗಿ ಪರಿಣಮಿಸಿದುವು. ಆದುದರಿಂದ ಭಕ್ತಿಮಾರ್ಗಕ್ಕೆ ವಿದೇಶೀಯ ಮತಗಳ ಸಂಪರ್ಕವೇ ಕಾರಣವೆಂದು ಕೆಲವು ಪಾಶ್ಚಾತ್ಯರು ಹೇಳಿರುವುದಕ್ಕೆ ಯಾವ ಆಧಾರವೂ ಇಲ್ಲ. ಪ್ರಾಚೀನ ಆರ್ಯರು ಪ್ರಕೃತಿಯ ಶಕ್ತಿಗಳನ್ನು ಉತ್ಪ್ರೇಕ್ಷಿಸಿ ಇಂದ್ರ, ವರುಣ, ಅಗ್ನಿ, ರುದ್ರ, ವಿಷ್ಣು, ಸೂರ್ಯ, ಸೋಮ ಇತ್ಯಾದಿ ದೇವತೆಗಳನ್ನಾಗಿ ಭಾವಿಸಿದ್ದರಿಂದ ವೇದಗಳಲ್ಲಿ ಉಚ್ಚತರವಾದ ಆಧ್ಯಾತ್ಮಿಕ ವಿವೇಚನೆ ಕಂಡುಬರುವುದಿಲ್ಲವೆಂದೂ, ಋಷಿಗಳಿಗೆ ಮುಖ್ಯವಾಗಿ ದಕ್ಷಿಣೆಯ ಮೇಲೆಯೇ ಆಸೆಯೆಂದೂ, ಆ ಕಾಲದಲ್ಲಿ ಮೂರ್ತಿಪೂಜೆಯಿರಲಿಲ್ಲವೆಂದೂ ಉಪನಿಷತ್ತುಗಳ ಕಾಲದಲ್ಲಿ ಮಾತ್ರ ಬ್ರಹ್ಮ–ಆತ್ಮ ಸಂಬಂಧವು ಕಲ್ಪಿತವಾಯಿತೆಂದೂ ಪಾಶ್ಚಾತ್ಯ ಪಂಡಿತಂಮನ್ಯರು ಹೇಳುವರು. ಇದು ಕೇವಲ ಭ್ರಾಂತಿ. ವೇದಗಳಲ್ಲಿ ಸಗುಣ ನಿರ್ಗುಣ ಭೇದವನ್ನನುಸರಿಸಿ ದೇವತಾಮೂರ್ತಿಗಳ ಮತ್ತು ಆತ್ಮದ ಉಲ್ಲೇಖವಿದೆ. ಇಂದ್ರನು ತುವಗ್ರೀವ, ವಪೋದರ, ಸುಬಾಹು, ಸುಶಿಪ್ರ, ಹರಿಕೇಶ ಎಂದೂ, ರುದ್ರನು ರುದೂದರ, ಭಭ್ರು, ಸ್ಥಿರವಾದ ಅಂಗವುಳ್ಳವನು, ಪುರುರೂಪನು, ಉಗ್ರನು ಎಂದೂ, ವಿಷ್ಣುವು ಯುವ, ಬೃಹಚ್ಛರೀರನೆಂದೂ, ಪೂಷನು ಶ್ಮಶ್ರು ಉಳ್ಳವನು ದಂತಹೀನನು ಎಂದೂ, ಸವಿತೃ ಮತ್ತು ವರುಣರಿಗೆ 'ಹಿರಣ್ಯದ್ರಾಪಿ'ಯಿದೆ ಎಂದೂ ವರ್ಣಿಸಿರುವುದರಿಂದಲೂ, ಭಾರತೀ, ಇಡಾ, ಸರಸ್ವತೀ ದೇವಿಯರು ಹಿರಣ್ಯಾಭರಣಭೂಷಿತರೆಂದೂ, ಸರಸ್ವತಿಗೆ ವಾಗ್ರೂಪ, ನದೀರೂಪ ಮತ್ತು ಮೂರ್ತಿರೂಪವಿದೆಯೆಂದು ಹೇಳಿರುವುದರಿಂದಲೂ, ಇಂದ್ರನ ವಿಗ್ರಹಗಳನ್ನು ಮನೆಯಲ್ಲಿ ಋಷಿಗಳು ಪೂಜಿಸುತ್ತಿದ್ದರೆಂದು ಸ್ಪಷ್ಟವಾಗಿ ಹೇಳಿರುವುದರಿಂದಲೂ ಆರ್ಯರು ವಿಗ್ರಹಾರಾಧನೆಯನ್ನೂ ಮಾಡುತ್ತಿದ್ದರೆಂದು ನಿರ್ಧರಿಸಬಹುದು.

*(ಡಾ. ಎಸ್.ಶ್ರೀಕಂಠಶಾಸ್ತ್ರೀ, 'ಭಾರತೀಯ ಸಂಸ್ಕೃತಿ', ಪು.೬೫-೬೬, ೨೦೦೬ರ ಪ್ರಕಟಣೆ)*

# ಆಧ್ಯಾತ್ಮಿಕ ಸಂಭಾಷಣೆ



## ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

**ಪ್ರಶ್ನೆ:** ಎಲ್ಲ ಧರ್ಮಗಳೂ ಸತ್ಯ, ಎಷ್ಟು ಮತವೋ ಅಷ್ಟು ಪಥ ಎಂದು ಠಾಕೂರ್ ಹೇಳುತ್ತಾರೆ. ಆದರೆ ಬೇರೆ ಬೇರೆ ಧರ್ಮಗಳಲ್ಲಿ ಎಷ್ಟು fundamental rules (ಮೂಲಭೂತ ನಿಯಮಗಳು) ಇವೆ!

**ಮಹಾರಾಜ್:** fundamental ! ಯಾರು fundamentalist ಆಗಿದ್ದಾರೋ, ಅವರೇ fundamental rules ಹೇಳುತ್ತಾರೆ.

**ಪ್ರಶ್ನೆ:** ಬೌದ್ಧ ಮತ್ತು ಹಿಂದೂ ಧರ್ಮಗಳಲ್ಲಿ ಜನ್ಮಾಂತರ (ಪುನರ್ಜನ್ಮ) ತತ್ತ್ವ ಇದೆ. ಆದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿ ಅದು ಇಲ್ಲ.

**ಮಹಾರಾಜ್:** ಸರಿ, ಬೌದ್ಧ ಮತ್ತು ಹಿಂದೂ ಧರ್ಮಗಳನ್ನೇ ನೋಡೋಣ. ಬೌದ್ಧರು ನಿರ್ವಾಣ ಎನ್ನುತ್ತಾರೆ, ಹಿಂದೂಗಳು ಮುಕ್ತಿ ಎನ್ನುತ್ತಾರೆ. ಅಂದರೆ ಅಜ್ಞಾನದ ನಿವೃತ್ತಿ. ಇಲ್ಲಿ ವ್ಯತ್ಯಾಸವೆಲ್ಲಿ ಬಂತು? ಎಲ್ಲರೂ ವಾಸನಾಶೂನ್ಯರಾಗಬೇಕು ಎಂದೇ ಎಲ್ಲರೂ ಹೇಳುತ್ತಾರೆ. ಈ ರೀತಿ ಇದು ಹೋಲಿಕೆ ಎಂದಾಗುವುದಿಲ್ಲವೆ ?

**ಪ್ರಶ್ನೆ:** ಇಲ್ಲ ಮಹಾರಾಜ್, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಲ್ಲಿ ಜನ್ಮಾಂತರ ತತ್ತ್ವ ಇಲ್ಲ.

**ಮಹಾರಾಜ್:** ಜನ್ಮಾಂತರವಿಲ್ಲ , ಸರಿ. ಆದರೆ ವಾಸನಾಶೂನ್ಯರಾಗ ಬೇಕೆಂದು ಅಲ್ಲಿಯೂ ಹೇಳಿದೆ. ಇಲ್ಲಿ ಸ್ವಲ್ಪ ಪ್ರಯತ್ನಪಟ್ಟರೆ ವ್ಯತ್ಯಾಸ ತಿಳಿಯುತ್ತದೆ. ಇನ್ನೂ ಸ್ವಲ್ಪ ಒಳಹೊಕ್ಕರೆ ಅದರೊಳಗೆ ಅವುಗಳಲ್ಲಿ ಹೋಲಿಕೆಯೂ ಕಂಡುಬರುತ್ತದೆ.

**ಪ್ರಶ್ನೆ:** ಸೆಮಿಟಿಕ್ ಧರ್ಮಗಳು ಜನ್ಮಾಂತರವನ್ನು ಒಪ್ಪುವುದಿಲ್ಲ.

**ಮಹಾರಾಜ್:** ಮೃತ್ಯುವಿನ ನಂತರ ಅಸ್ತಿತ್ವ ಇದೆ ಎಂದು ಒಪ್ಪಿ ಕೊಳ್ಳುವ ಎಲ್ಲ ಧರ್ಮಗಳನ್ನೂ ಒಪ್ಪಿಕೊಳ್ಳಬೇಕು. ಸತ್ತ ಮೇಲೆ ಯಾವ ಅಸ್ತಿತ್ವವೂ ಇಲ್ಲವೆಂದು ಹೇಳುವವರಿದ್ದರೆ ಅವರಿಗೆ ಯಾವ ಧರ್ಮವೂ ಇಲ್ಲ, ಎಲ್ಲ ಧರ್ಮಗಳೂ ಮೃತ್ಯುವಿನ ನಂತರ ಅಸ್ತಿತ್ವ ವನ್ನು ಸ್ವೀಕರಿಸುತ್ತವೆ. ಬೌದ್ಧರೂ ಒಪ್ಪುತ್ತಾರೆ, ಹಿಂದೂಗಳು ಒಪ್ಪು ತ್ತಾರೆ. ಇಸ್ಲಾಂ ಕೂಡ ಮನ್ನಿಸುತ್ತದೆ. ಇಸ್ಲಾಂನಲ್ಲಿ ಹೊಸತೇನೂ ಇಲ್ಲ. ಸೆಮಿಟಿಕ್ ಧರ್ಮ – ಯಾವುದು ಯಹೂದ್ಯರ ಧರ್ಮವೋ, ಕ್ರೈಸ್ತರದೂ ಅದೇ, ಮುಸಲ್ಮಾನರದ್ದೂ ಅದೇ. ಎಲ್ಲ Semitic.

**ಪ್ರಶ್ನೆ:** ಕೆಲವರು ಜನ್ಮಾಂತರ ಇದೆ ಎನ್ನುತ್ತಾರೆ, ಕೆಲವರು ಜನ್ಮಾಂತರ ವಿಲ್ಲವೆಂದು ಹೇಳುತ್ತಾರೆ. ಯಾವುದು ಸರಿ ಎಂದು ತಿಳಿಯುವುದಿಲ್ಲ.

**ಮಹಾರಾಜ್:** ಜನ್ಮಾಂತರ ಇಲ್ಲವೆಂದು ಯಾವ ಮತದಲ್ಲಿ ಹೇಳಿದೆ?

**ಪ್ರಶ್ನೆ:** ಮುಸಲ್ಮಾನ್ ಮತ್ತು ಕ್ರೈಸ್ತ ಧರ್ಮದಲ್ಲಿ.

**ಮಹಾರಾಜ್:** ಬೌದ್ಧ ಧರ್ಮದಲ್ಲಿ ಇದೆ. Semitic religionನಲ್ಲಿ ಜನ್ಮಾಂತರವಿಲ್ಲ, ಆದರೆ ಅದರ ಅಸ್ತಿತ್ವವಿದೆ. ದೇಹಾಂತರವಾದ ಮೇಲೆ ಜೀವದ ಅಸ್ತಿತ್ವ ಇದೆ. ಅದಿಲ್ಲದಿದ್ದರೆ ಯಾರು ಸ್ವರ್ಗಕ್ಕೆ ಹೋಗುತ್ತಾರೆ, ಯಾರು ನರಕಕ್ಕೆ ಹೋಗುತ್ತಾರೆ?

ಜೀವದ ಅಸ್ತಿತ್ವ ಇದ್ದದ್ದೇ ಆದರೆ,

ದೇಹ ಜೀವವಲ್ಲ. ದೇಹ ಸುಟ್ಟು ಒಂದು ಹಿಡಿ ಬೂದಿಯಾಗುತ್ತದೆ. ಹಾಗಾಗಿ ದೇಹವನ್ನು ಮೀರಿದ್ದು ಯಾವುದು? ಜೀವವೇ. ಈ ಸಿದ್ಧಾಂತ ಎಲ್ಲರಿಗೂ ಒಂದೇ. ತಿಳಿಯಿತೆ? ಹೋಲಿಸಿ ನೋಡು.

**ಪ್ರಶ್ನೆ:** ಬ್ರಹ್ಮಜ್ಞಾನ, ಆತ್ಮಜ್ಞಾನ ಮತ್ತು ಭಗವದ್‌ಲಾಭ ಇವು ಒಂದೇನೆ, ಮಹಾರಾಜ್?

**ಮಹಾರಾಜ್:** ಆತ್ಮಜ್ಞಾನವೆಂದರೆ ತನ್ನ ಸ್ವರೂಪದ ಜ್ಞಾನ; ಬ್ರಹ್ಮಜ್ಞಾನ ವೆಂದರೆ (ಬ್ರಹ್ಮ ಅಂದರೆ ಬೃಹತ್) ಜಗತ್ತಿಗೆ ಕಾರಣನಾದ ಸರ್ವ ವ್ಯಾಪಿ ಬ್ರಹ್ಮನ ಜ್ಞಾನ. **'ಯೇನ ಜಾತಾನಿ ಜೀವಂತಿ ... ತತ್ ಬ್ರಹ್ಮ.'** ಇನ್ನು ಭಗವದ್‌ಲಾಭವೆಂದರೆ: **ಭಗ** ಅಂದರೆ, ಆತನು ಷಡೈಶ್ವರ್ಯ ಪೂರ್ಣನಾಗಿ ಇಡೀ ಜಗತ್ತನ್ನು ಆವರಿಸಿಕೊಂಡಿದ್ದಾನೆ, ಆತನ ಜ್ಞಾನ. ಇವೇ ಈ ಮೂರು ಶಬ್ದಗಳ ಅರ್ಥ.

**ಪ್ರಶ್ನೆ:** 'ಶ್ರೀರಾಮಕೃಷ್ಣ ವಚನವೇದ' ದಲ್ಲಿ ಠಾಕೂರ್ ಹೇಳುತ್ತಾರೆ, ಭಕ್ತಿ ಪಕ್ವವಾದರೆ ಭಾವ, ಭಾವ ಪಕ್ವವಾದರೆ ಮಹಾಭಾವ ಅಥವಾ ಪ್ರೇಮ ಎಂದು. ಮಹಾಭಾವವಾದ ಮೇಲೆ ವಸ್ತುಲಾಭ (ಬ್ರಹ್ಮ ಜ್ಞಾನ) ವಾಗುತ್ತದೆ. ಜೀವಿಗಳು ಭಾವದ ತನಕ ಏರಬಲ್ಲರು, ಅಂದರೆ ಜೀವಿಗಳಿಗೆ ಮಹಾಭಾವ, ಅಥವಾ ಪ್ರೇಮ ಸಿಗುವುದಿಲ್ಲ. ಇನ್ನು ಮಹಾಭಾವವಾಗದಿದ್ದರೆ ವಸ್ತು ಲಾಭವಾಗುವುದಿಲ್ಲ, ಇಲ್ಲಿ ಜೀವಿಗಳ ಗತಿ ಏನು?

**ಮಹಾರಾಜ್:** ಜೀವಿಗಳಿಗೆ ಮಹಾಭಾವ ಉಂಟಾಗುವುದಿಲ್ಲವೆಂದರೆ, ಅಧಿಕಾರಿಯಲ್ಲದವರಿಗೆ (ಅಧ್ಯಾತ್ಮದಲ್ಲಿ ಮೇಲಿನ ಹಂತಕ್ಕೆ ಏರ ದವರಿಗೆ) ಅದು ಸಿಗುವುದಿಲ್ಲ ಎಂದರ್ಥ. ಅವತಾರಗಳಿಗೆ ಅದು ಸಿಗುತ್ತದೆ. ಅವತಾರ ಪುರುಷರಿಗೆ ಮಹಾಭಾವ ಬಂದ ಮೇಲೂ ಅವರು ಈ ಜಗತ್ತಿನಲ್ಲಿ ಇರಬಲ್ಲರು. ಚೈತನ್ಯದೇವ, ಶ್ರೀರಾಮಕೃಷ್ಣರು ಇವರುಗಳಿಗೆ ಮಹಾಭಾವ ಬಂದಿತ್ತು. ಅನಂತರವೂ ಅವರು ಈ ಜಗತ್ತಿನಲ್ಲಿದ್ದರು. ಆದರೆ ಸಾಮಾನ್ಯ ಜನರಿಗೆ ಮಹಾಭಾವ ಬಂದರೆ ಅವರು ಹಿಂದಿರುಗಲಾರರು. ಅಂತಹವರು ಹಿಂದಿರುಗುವ ಆವಶ್ಯ ಕತೆ ಕೂಡ ಇಲ್ಲ, ಈ ಭಾವ ಅಲ್ಲಿಯ ತನಕವೂ ಸಾಗುತ್ತದೆ.

**ಪ್ರಶ್ನೆ:** ಮಹಾರಾಜ್, ಇವತ್ತು Good Friday (ಕ್ರೈಸ್ತರ ಶುಭ ಶುಕ್ರವಾರ), Good ಎಂದು ಏಕೆ ಹೇಳುತ್ತಾರೆ?

**ಮಹಾರಾಜ್:** ಏಸುಕ್ರಿಸ್ತನು ಲೋಕಕಲ್ಯಾಣಕ್ಕಾಗಿ, ಜಗತ್ತಿನ ಹಿತಕ್ಕಾಗಿ ತನ್ನ ಜೀವನವನ್ನು ಅರ್ಪಿಸಿದ್ದಕ್ಕಾಗಿ ಈ ದಿನವನ್ನು good ಎಂದು ಹೇಳುತ್ತಾರೆ. ತಾನೇ ಸ್ವತಃ ಶಿಲುಬೆಯನ್ನು ಹಿಡಿದುಕೊಂಡು, ಅವನು ತನ್ನ ಪ್ರಾಣವನ್ನರ್ಪಿಸಿದ್ದ. ಈ ಘಟನೆ ಹೇಗೆಂದರೆ, ಆತನನ್ನು ಶಿಲುಬೆ

ಗೇರಿಸಿ ತುಂಬಾ ಹೊತ್ತಾದರೂ ಕೂಡ, ಆತನು ಮೃತ್ಯುವಶನಾಗಲಿಲ್ಲ. ಸೈನಿಕರು ಕಾವಲು ಕಾಯುತ್ತಿದ್ದರು. ಸೈನಿಕರಿಗೋ ವಿಳಂಬವಾಗುತ್ತಿತ್ತು. ಆಗ ಒಬ್ಬ ಒಂದು ಕೊಡಲಿ ತಂದು ಆತನ ಪಕ್ಕೆಲಬುಗಳಿಗೆ ಹೊಡೆದ; ಬೇಗ ಸಾಯಲೆಂದು.

**ಪ್ರಶ್ನೆ:** Mourning Day (ಶೋಕ ದಿನ) ಎಂದೂ ಹೇಳುತ್ತಾರೆ.

**ಮಹಾರಾಜ್:** Mourning ಏಕೆ? ಆತ ಜಗತ್ತಿನ ಹಿತಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಿದ. ಜಗತ್ತಿನ ಕಲ್ಯಾಣಕ್ಕಾಗಿ – ಅದಕ್ಕೆ ಈ ಶುಕ್ರವಾರವನ್ನು **ಗುಡ್‌ಫ್ರೈಡೇ** ಎನ್ನುವರು.

**ಪ್ರಶ್ನೆ:** ಆ ದಿನಗಳಲ್ಲಿ ಜಂಟೈಲರ (gentile) ಹತ್ಯೆ ನಡೆದಿತ್ತು.

**ಮಹಾರಾಜ್:** ಆ ಕಾಲದಲ್ಲಿ ಅವರೇ ಸಭ್ಯರಾಗಿದ್ದರು. ಅವರು ಯೆಹೂದ್ಯರನ್ನು ಮನುಷ್ಯರೆಂದೇ ಪರಿಗಣಿಸುತ್ತಿರಲಿಲ್ಲ. ಅವರು ರಾಜನ ಕಡೆಯವರು. ಯಹೂದ್ಯರು ಪರಾಧೀನರು. ಇದು ಹೇಗೆಂದರೆ ಇಂಗ್ಲೀಷರು, ಭಾರತೀಯರನ್ನು ಮನುಷ್ಯರೆಂದು ಪರಿಗಣಿಸುತ್ತಿರಲಿಲ್ಲ, ಅದೇ ರೀತಿ.

**ಪ್ರಶ್ನೆ:** ಗೀತೆಯ 'ದೈವಾಸುರಸಂಪದ್ವಿಭಾಗಯೋಗ' ಅಧ್ಯಾಯದಲ್ಲಿ ಒಂದು ಶ್ಲೋಕವಿದೆ:

> ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।
> ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥ (೧೬-೩)

ಇಲ್ಲಿ '**ನಾತಿಮಾನಿತಾ**' ಎಂದರೇನು?

**ಮಹಾರಾಜ್:** ಅತಿಮಾನಿತಾ ಎಂದರೆ ದಂಭ. ಅದು ಉಳ್ಳವನೇ ಸ್ವಾರ್ಥಿ. ಅದರ ಅಭಾವವೇ '**ನಾತಿಮಾನಿತಾ**'

**ಪ್ರಶ್ನೆ:** 'ಅತಿಮಾನಿತ'ದ 'ಅತಿ'ಯ ಅಗತ್ಯವಿಲ್ಲ; 'ಮಾನಿತ' ಇರುತ್ತದೆ, ಅರ್ಥಾತ್ ಸ್ವಲ್ಪ ಅಹಂಕಾರವಿರುತ್ತದೆ. ಹಾಗೆ ತಾನೆ?

**ಮಹಾರಾಜ್:** ದಂಭ ಇರುವುದಿಲ್ಲ. ವಾದ ಮಾಡುವಾಗ, ನಾನೇನು ಹೇಳುತ್ತೇನೋ ಅದೇ ಸರಿ ಎಂದು ನಾವು ಭಾವಿಸುತ್ತೇವೆ. ಇತರರು ಹೇಳುವುದೆಲ್ಲ ತಪ್ಪು ಎಂದು ನಮ್ಮ ಭಾವನೆ.

**ಪ್ರಶ್ನೆ:** ಹಾಗಾದರೆ ಹೇಗಿರಬೇಕು, ಮಹಾರಾಜ್?

**ಮಹಾರಾಜ್:** ವಿನಯವಿರಬೇಕು.

**ಪ್ರಶ್ನೆ:** ಸ್ವಾಮೀಜಿ ಮನೆಯಲ್ಲಿದ್ದಾಗ, ಸಂಸಾರದಲ್ಲಿ ಬಡತನದಿಂದಾಗಿ ಬಹಳ ಕಷ್ಟಪಟ್ಟರು. ಒಂದು ದಿನ ಠಾಕೂರರಿಗೆ, 'ನಿಮ್ಮ ತಾಯಿ ಕಾಳಿಗೆ ಹೇಳಿ, ನನ್ನ ಮನೆಗೆ ಏನಾದರೂ ವ್ಯವಸ್ಥೆ ಮಾಡುವಂತೆ' ಎಂದರು. ಅದಕ್ಕೆ ಠಾಕೂರ್, 'ನೀನು ತಾಯಿಯನ್ನು ಸ್ವೀಕರಿಸಿಲ್ಲ , ಅದಕ್ಕಾಗಿ ಇಷ್ಟು ಕಷ್ಟ' ಎಂದರು. ಇದರ ಅರ್ಥ ವಿವರಿಸಿ, ಮಹಾರಾಜ್.

**ಮಹಾರಾಜ್:** ತಾಯಿಯನ್ನು ಸ್ವೀಕರಿಸುತ್ತಿದ್ದರೆ ಆಕೆ ಅವರ ಕಷ್ಟವನ್ನು ದೂರ ಮಾಡುತ್ತಿದ್ದಳು.

**ಪ್ರಶ್ನೆ:** ಸ್ವಾಮೀಜಿಗೆ ದೇವರ ಮೇಲೆ ವಿಶ್ವಾಸವಿರಲಿಲ್ಲವೆ? ಅವರೇ ಹೇಳುತ್ತಾರೆ, 'ಎಷ್ಟೊಂದು ಬಾರಿ ಭಗವಂತನನ್ನು ಕರೆದೆ!' ಎಂದು.

**ಮಹಾರಾಜ್:** ಭಗವಂತ ಮತ್ತು ಶಕ್ತಿ ಒಂದೇ ಏನು? ಭಗವಂತನೇ ತಾಯಿ ಎಂಬ ವಿಶ್ವಾಸ ಹೊಂದಿದರೆ, ಸಾಧಕನಿಗೆ ಭಗವಂತನ ಮಾತೃಭಾವ ಬಂದು, ಆ ಭಾವವನ್ನು ವಿಶೇಷವಾಗಿ ಪ್ರಕಾಶಪಡಿಸುತ್ತಾನೆ. ಆಕೆಯ ವಾತ್ಸಲ್ಯ ಭಾವ ಸಾಧಕನಲ್ಲಿ ವೃದ್ಧಿಸುತ್ತದೆ. ತಾಯಿ ಮಗುವಿನ ಕಷ್ಟವನ್ನು ಸಹಿಸಲಾರಳು; ಕಷ್ಟವನ್ನು ದೂರ ಮಾಡಿಬಿಡುತ್ತಾಳೆ. ಹಾಗೆ ಸ್ವಾಮೀಜಿ ತಾಯಿಯನ್ನು ಮನ್ನಿಸುತ್ತಿದ್ದರೆ, ಅವರ ಕಷ್ಟವನ್ನು ತಾಯಿ ದೂರ ಮಾಡುತ್ತಿದ್ದಳು.

**ಪ್ರಶ್ನೆ:** ಠಾಕೂರ್ ಹೇಳುತ್ತಿದ್ದರು, ಮನುಷ್ಯನಾಗಬೇಕಾದರೆ, 'ಮಾನ್ –ಹುಶ್' ಆಗಬೇಕೆಂದು, ಇದರ ಅರ್ಥವೇನು?

**ಮಹಾರಾಜ್:** ಕರ್ತವ್ಯದ ಪ್ರಜ್ಞೆ ಇರುವುದು. ಅಂದರೆ ಮನುಷ್ಯನಾಗಿ ಹುಟ್ಟಿ ಭಗವತ್ ಸಾಕ್ಷಾತ್ಕಾರಕ್ಕೆ ಪ್ರಯತ್ನ ಪಡುವುದೇ ಕರ್ತವ್ಯ. ಅದೇ ಕರ್ತವ್ಯ ಪ್ರಜ್ಞೆ.

**ಪ್ರಶ್ನೆ:** ಶ್ರೀಮಾತೆಯವರು ಒಂದು ಕಡೆ ಹೇಳುತ್ತಾರೆ, ಮಂತ್ರ, ತಂತ್ರ ಯಾವುದೂ ಬೇಡ, ಭಕ್ತಿ ಒಂದೇ ಸಾಕು ಎಂದು. ಇದರ ತಾತ್ಪರ್ಯವೇನೆಂದು ವಿವರಿಸಿ ಮಹಾರಾಜ್.

**ಮಹಾರಾಜ್:** ಇದನ್ನು context (ಸಂದರ್ಭ) ನೋಡಿ ಅರ್ಥ ಮಾಡಿಕೊಳ್ಳಬೇಕು. ಇನ್ನೊಂದು ಕಡೆ (ತಂತ್ರದ ಸಂಬಂಧವಾಗಿ) ಶ್ರೀಮಾತೆಯವರು ಹೇಳುತ್ತಾರೆ, ಇದನ್ನೆಲ್ಲ ಮನ್ನಿಸಬೇಕು ಎಂದು.

**ಪ್ರಶ್ನೆ:** ಹಾಗಾದರೆ ಈ ಮಾತಿನ ಅರ್ಥವೇನು?

**ಮಹಾರಾಜ್:** ಇಲ್ಲಿ ಮಂತ್ರವೆಂದರೆ, ದೀಕ್ಷಾಮಂತ್ರವಲ್ಲ. Ritual (ಪೂಜೆ, ವಿಧಿ-ನಿಷೇಧಗಳ) ಅಂದರೆ ಮಂತ್ರ, ಯಾಗ ಯಜ್ಞಾದಿಗಳ ಮಂತ್ರ. ಈ ಮಂತ್ರಗಳಿಂದ ಏನೂ ಪ್ರಯೋಜನವಾಗುವುದಿಲ್ಲ – ಭಗವತ್ಪ್ರೇಮ ಉಂಟಾಗುವುದಿಲ್ಲ. ಭಗವಂತನಲ್ಲಿ ಪ್ರೀತಿ ಎಂದರೆ ಭಕ್ತಿ. ಶ್ರೀಮಾತೆ ಹಾಗೆ ಹೇಳಿರುವುದು ಈ ಅರ್ಥದಲ್ಲಿ.

**ಪ್ರಶ್ನೆ:** ಠಾಕೂರ್ ಶ್ರೀಮಾತೆಯವರ ಬಗ್ಗೆ ಹೇಳುತ್ತಾರೆ, 'ಅವಳು ಶಾರದೆ, ಸರಸ್ವತಿ. ಜ್ಞಾನೋಪದೇಶ ಮಾಡಲು ಬಂದಿದ್ದಾಳೆ' ಎಂದು. ಆದರೆ ಶ್ರೀಮಾತೆಯವರ ಮಾತುಗಳಲ್ಲಿ ಎಲ್ಲೂ ಜ್ಞಾನದ ವಿಚಾರಗಳು ಸಿಗುವುದಿಲ್ಲ ; ಜಪ, ಭಕ್ತಿ ಇವೆಲ್ಲ ಸಿಗುತ್ತವೆ.

**ಮಹಾರಾಜ್:** ಜ್ಞಾನ ಎಂದರೆ ಏನೆಂದು ಅರ್ಥಮಾಡಿಕೊಂಡಿರುವೆ? ಶಂಕರಾಚಾರ್ಯರ ಉಪನಿಷತ್ ಭಾಷ್ಯವೆ? ಶ್ರೀಮಾತೆಯವರು ಇವುಗಳನ್ನು ಕೇಳಿಯೇ ಇಲ್ಲ. ಅವರಿಗೆ ಓದುವುದೂ ಬರುತ್ತಿರಲಿಲ್ಲ. ಜ್ಞಾನವೆಂದರೆ, ಯಾರಲ್ಲಿ essential features of divinity (ಆಧ್ಯಾತ್ಮಿಕ ಸ್ವಭಾವದ ಸಾರ) ಕಂಡುಬರುವುದೋ ಅದು. ಯಾರ ಮೂಲಕ ಅಧ್ಯಾತ್ಮಜ್ಞಾನ ಲಭಿಸುವುದೋ, ಅದು. ಆ ಉಪಾಯ ಇತರರಿಗೆ ಹೇಳಿಕೊಡುವಂತದ್ದು. ಶ್ರೀಮಾತೆಯವರ ಜೀವನದಲ್ಲಿ ಈ ವಿಚಾರವೇ ತುಂಬಿ ಹೋಗಿವೆ.

**ಪ್ರಶ್ನೆ:** ಶ್ರೀರಾಮಕೃಷ್ಣರು ಸ್ವಾಮೀಜಿಗೆ ಹೇಳುತ್ತಿದ್ದರು, ನಿರ್ವಿಕಲ್ಪ ಸ್ಥಿತಿಗಿಂತಲೂ ಉಚ್ಚ ಅವಸ್ಥೆ ಇದೆ ಎಂದು. ಅದು ಯಾವ ಅವಸ್ಥೆ ?